ಒಂದಷ್ಟು ದುಡ್ಡು ಕೊಡದೇ ಹೋದರೆ ಡಾಕ್ಟ್ರು ಗಲಾಟೆ ಮಾಡುವುದೂ, ಚಿಕಿತ್ಸೆ ನೀಡದಿರುವುದೂ ಗೊತ್ತಿತ್ತು. ಆದ್ದರಿಂದ ಬಹಳ ಸಂಕೋಚ, ಅವಮಾನದಿಂದ ಮೈಯೆಲ್ಲಾ ಹಿಡಿಯಾಗಿ ಜಯ್ಯಣ್ಣರ ಸ್ಕೂಲಿಗೋದಳು.

ಮುಖ್ಯೋಪಾಧ್ಯಾಯರ ಎದುರು ನಿಂತು ಜಯ್ಯಣ್ಣರ ಸಂಬಳದಲ್ಲಿ ಅರ್ಧದಷ್ಟು ಅಥವಾ ಕಾಲು ಭಾಗವನ್ನಾದರೂ ತನಗೆ ಕೊಡುವಂತೆ ವ್ಯವಸ್ಥೆ ಮಾಡಲು ಕೋರಿಕೊಂಡಳು. ಮನೆಯ ಎಲ್ಲ ಖರ್ಚು, ಮಕ್ಕಳ ಎಲ್ಲ ಖರ್ಚು ತನ್ನದೇ ಎಂದು ಪರಿಪರಿಯಾಗಿ ಹೇಳಿದಳು. ಚಳಿಗೆ ರಾತ್ರಿ ಮಕ್ಕಳು ರಗ್ಗಿಲ್ಲದೆ ನಡುಗುತ್ತಾರೆಂದೂ, ಭದ್ರಿಗೆ ಹುಚ್ಚುನಾಯಿಯ ಇಂಜೆಕ್ಷನ್ ಕೊಡಿಸಲು ಚಿಕ್ಕಾಸಿಲ್ಲವೆಂದೂ, ಇತ್ತೀಚೆಗೆ ದೊಡ್ಡವಳಾಗಿರುವ ಗೀತಳ ಕೂರಿಸುವ ಕಾರ್ಯಕ್ಕೆ ದುಡ್ಡು ಬೇಕೆಂದೂ ಖರ್ಚಿನ ಪಟ್ಟಿಯನ್ನೇ ಇಟ್ಟಳು. ಅದಕ್ಕೆ ಮುಖ್ಯೋಪಾಧ್ಯಾಯರು 'ಹಾಗೆ ಮಾಡಲು ಬರುವುದಿಲ್ಲ. ಗಂಡ ಹೆಂಡತಿ ಜಗಳ ಎಲ್ಲ ಮನೆಯಲ್ಲೇ ಬಗೆಹರಿಸಿಕೊಳ್ಳಬೇಕು' ಎಂದು ಸಾಗ ಹಾಕಿದರು. ಅಷ್ಟಕ್ಕೇ ಸುಮ್ಮನಾಗದೆ ಕಾಡು ಮೃಗದಂತಿದ್ದ ಆತ 'ಇನ್ನೇನಮ್ಮ ಜಯ್ಯಣ್ಣ ಕುಡಿದು ಕುಡಿದು ಆರೋಗ್ಯ ಹಾಳು ಮಾಡಿಕೊಂಡಿದ್ದಾನೆ. ಇಷ್ಟರಲ್ಲಿಯೇ ಶಿವನ ಪಾದ ಸೇರಬಹುದು. ಆಗ ನಿನಗೇ ಪೆನ್ಷನ್ ಬರುವ ಹಾಗೆ ಮಾಡುತ್ತೇನೆ. ನಿನಗೋ, ನಿನ್ನ ಮಗಳಿಗೋ ಸರ್ಕಾರಿ ಕೆಲಸ ಸಹ ಸಿಗಬಹುದು. ಅದೃಷ್ಟವಂತೆಯಮ್ಮ ನೀನು' ಅಂದ. ಆ ಮಾತು ಕೇಳಿ ಲಕ್ಷ್ಮಿಗೆ ಏನು ಹೇಳಬೇಕೆಂಬುದೇ ತೋಚದಾಯಿತು. ಹೀಗೆ ಶಾಲೆಗೆ ಹೋಗಿ ಕಂಡವರೆದುರು ತನ್ನ ಮನೆಯ ಕಷ್ಟಗಳನ್ನು ಹೇಳಿಕೊಳ್ಳುವುದು ಎಲ್ಲರೆದುರು ಬೆತ್ತಲೆ ನಿಂತಂತೆನಿಸಿತು. ಇಂಥ ಅವಮಾನಕರ ಸನ್ನಿವೇಶಗಳು ಮದುವೆ ಆದಾಗಿನಿಂದಲೂ ಆಗಿಂದಾಗ್ಗೆ ಎದುರಾಗುತ್ತಲೇ ಇದ್ದವು. ಕುಡುಕ ಜಯ್ಯಣ್ಣ ಎನ್ನುವ ಮಾತು ಊರಿನ ನುಡಿಗಟ್ಟಾಗಿ ಹೋಗಿತ್ತು. ಅದು ಅನೇಕ ಕಥೆ, ಪದ್ಯ, ಒಗಟು, ಗಾದೆ, ಉಪಮಾನ, ಉಪಮೇಯವಾಗಿ ಹೋಗಿತ್ತು. ಗೀತ, ಸೀತ, ಭದ್ರಿಯರು ಈ ಅಪಮಾನದ ವಿಷಯವನ್ನು ತಾಯಿಯ ಬಳಿ ತಂದರೆ ಲಕ್ಷ್ಮಿ ಅವರನ್ನು ಅಪ್ಪಿ ಸಂತೈಸುತ್ತಿದ್ದಳು.

ಲಕ್ಷ್ಮಿಗೆ ಸದ್ಯಕ್ಕೆ ಬರುವ ಯಾವ ದುಡ್ಡೂ ಇರಲಿಲ್ಲವಾದ್ದರಿಂದ ಭದ್ರಿಗೆ ಇಂಜೆಕ್ಷನ್ ಮಾಡಿಸಲೇ ಬೇಕಾದ್ದರಿಂದ ಸಾವಿರಾರು ರೂಪಾಯಿ ಜೋಡಿಸುವ ಯಮಸಾಹಸದಲ್ಲಿ ಸಿಲುಕಿ ಕೊಂಡಿದ್ದಳು. ಎಷ್ಟೋ ವರ್ಷಗಳ ಹಿಂದೆ ತನ್ನ ತಾಯಿ ಸಾಯುವ ಹೊತ್ತಿನಲ್ಲಿ ಲಕ್ಷ್ಮಿಯ ಕೈಯಲ್ಲಿಟ್ಟು ಕಣ್ಣು ಮುಚ್ಚಿದ್ದ ಬೆಂಡೋಲೆಗಳನ್ನು ತೆಗೆದುಕೊಂಡು ಚಿನ್ನ ಬೆಳ್ಳಿ ಅಂಗಡಿಯಲ್ಲಿ ಮಾರಿದಳು. ದೊಡ್ಡವಳಾಗಿರುವ ತನ್ನ ಹಿರಿಮಗಳು ಗೀತಳಿಗೆ ಏನಾದರೂ ಒಂದು ಚಿನ್ನದ ಒಡವೆಯನ್ನು ಮಾಡಿಸುವ ಲಕ್ಷ್ಮಿಯ ಕನಸು ನುಚ್ಚುನೂರಾಯಿತು. ಲಕ್ಷ್ಮಿಯ ದುಡ್ಡಿನ ಜರೂರತ್ತನ್ನು ಅವಳ ಮುಖಭಾವದಿಂದಲೇ ಗ್ರಹಿಸಿದ ಅಂಗಡಿಯವ ಹೇಳಿದ ದುಡ್ಡಿಗೆ ಮಾರಿದ ಲಕ್ಷ್ಮಿ ಆಸ್ಪತ್ರೆಗೆ ತೆರಳಿ ಭದ್ರಿಗೆ ಇಂಜೆಕ್ಷನ್ ಮಾಡಿಸಿದಳು. ಅದು ಭದ್ರಿಗೆ ಮಾಡಿದ ಎರಡನೇ ಇಂಜೆಕ್ಷನ್ ಆಗಿತ್ತು. ಲಕ್ಷ್ಮಿ ಕೊಟ್ಟ ದುಡ್ಡು ಯಾವುದಕ್ಕೂ ಸಾಲದು ಎಂದು ಡಾಕ್ಟರು ಉಗಿದರು.

'ಸಾರ್, ಭದ್ರಿಗೇನೂ ತೊಂದ್ರೆ ಇಲ್ವ ಸಾರ್? ಹುಟ್ಟಿದ ಮೂರು ಜನ ಗಂಡು ಮಕ್ಕಳಲ್ಲಿ ಇವನೊಬ್ಬನೇ ಗಂಡು ಮಗ ಸಾರ್ ಬದುಕುಳಿದದ್ದು' .

'ಮೇಷ್ಟ್ರ ಹೆಂಡ್ತಿ ಅಂತೀಯ? ಇಂಜೆಕ್ಷನ್ನಿಗೆ ದುಡ್ಡಿಲ್ಲ ಅಂತೀಯಾ?'

'ದುಡ್ಡು ಕೊಡ್ತೀನಿ ಭದ್ರಿದೇಳಿ ಸಾರ್'

'ಮೂರನೇ ಇಂಜೆಕ್ಷನ್ನಿಗೆ ಬರುವಾಗ ಎಲ್ಲ ದುಡ್ಡೂ ತರ್ಬೇಕು'.

ಭದ್ರಿಯನ್ನು ಸೊಂಟದ ಮೇಲೆ ಕೂರಿಸಿಕೊಂಡು ಮನೆಗೆ ಬಂದಳು ಲಕ್ಷ್ಮಿ. ನಾಯಿ ಕಡಿದ ಜಾಗದಲ್ಲಿ ಊತವಿತ್ತು. ನೋವಿನಿಂದ ಭದ್ರಿ ನರಳುತ್ತಿದ್ದ. ಭದ್ರಿಯನ್ನು ಹಾಸಿಗೆ ಮೇಲೆ ಮಲಗಿಸಿ ಅವನ ಪಕ್ಕದಲ್ಲಿಯೇ ಲಕ್ಷ್ಮಿ ಉರುಳಿ ಕೊಂಡಳು. ಇಷ್ಟರಲ್ಲಿಯೇ ಜಯ್ಯಣ್ಣ ಮೇಷ್ಟ್ರ ಸಾವು ತನಗೆ ಒಳ್ಳೆಯದು ಮಾಡುತ್ತದೆ ಎಂದ ಹೆಡ್ಮಾಸ್ಟ್ರ ಮಾತು ನೆನಪಾಗಿ ಅವಳ ಮನಸ್ಸೆಲ್ಲ ಕಹಿಯಾಯಿತು. ಜನ ಹೀಗೂ ಯೋಚಿಸುತ್ತಾರೆಯೇ ಎನಿಸಿತು. ಲಕ್ಷ್ಮಿಯ ಕಣ್ಣು ಎಳೆಯತೊಡಗಿದವು. ನಿದ್ರೆ ಆವರಿಸಿತು. ಆಗ ಸಂಜೆಯಾಗಿತ್ತು.

ನಿದ್ದೆ ಮತ್ತು ಎಚ್ಚರದ ಮಧ್ಯೆ ಜೋಲಿ ಹೊಡೆಯುತ್ತಿದ್ದ ಲಕ್ಷ್ಮಿಗೆ ಹೊಡೆದು ಎಬ್ಬಿಸಿದಂತಾಗಿದ್ದು ಕೆಲವು ರೈತರು ಎಮ್ಮೆಯ ಶವವನ್ನು ಟ್ರ್ಯಾಕ್ಟರಲ್ಲಿ ತಂದು ಮನೆಯೆದುರು ಇಳಿಸಿದಾಗ. ಲಾರಿಯವರೋ, ಬಸ್ಸಿನವರೋ ಎಮ್ಮೆಗೆ ಗುದ್ದಿ ಪರಾರಿಯಾಗಿದ್ದ ಪ್ರಕರಣವಾಗಿತ್ತದು. ಇನ್ನೂ ಜೀವವಿದ್ದ ಎಮ್ಮೆಯನ್ನು ಆಸ್ಪತ್ರೆಗೆ ಟ್ರ್ಯಾಕ್ಟರಲ್ಲಿ ಸಾಗಿಸುತ್ತಿರುವಾಗ ಪ್ರಾಣ ಬಿಟ್ಟಿದ್ದ ಎಮ್ಮೆಯನ್ನು ಜಯ್ಯಣ್ಣರ ಮನೆ ಹತ್ತಿರ ತಂದಿದ್ದರು.

ಈಗ ಹತ್ತು ವರ್ಷಗಳಿಂದ ಮನೆಯಲ್ಲಿದ್ದ ಎಮ್ಮೆ ಅದು. ಮನೆಯಲ್ಲಿಯೇ ಹುಟ್ಟಿ ಬೆಳೆದದ್ದು. ಕಾಯ್ಲೆದಲ್ಲ, ಕಸಾಲೆದಲ್ಲ. ಐದು ಎಮ್ಮೆ ಕರುಗಳನ್ನು ಕೊಟ್ಟು ಇಡೀ ಮನೆಯನ್ನು ಅಷ್ಟೂ ವರ್ಷಗಳ ಕಾಲ ಕಾಪಾಡಿಕೊಂಡು ಬಂದಿತ್ತು. ಈಗ ಹದಿನೈದು ದಿನದ ಕೆಳಗೆ ಹೆಣ್ಣುಕರು ಹಾಕಿ ದಿನಕ್ಕೆ ಆರು ಲೀಟರ್ ಹಾಲು ಕೊಡುತ್ತಿದ್ದ ಎಮ್ಮೆ ಅದಾಗಿತ್ತು. ಮನೆಯ ಎಲ್ಲ ಸುಖ ದುಃಖಗಳಲ್ಲಿಯೂ ಲಕ್ಷ್ಮಿಯ ಕೈಹಿಡಿದಿದ್ದ ಎಮ್ಮೆ ಅದು. ಆ ಎಮ್ಮೆಗೆ ಗೌರಿ ಎಂದು ತನ್ನ ತಾಯಿಯ ಹೆಸರನ್ನಿಟ್ಟು ತಾಯಿಯಂತೆಯೇ ನೋಡಿಕೊಂಡಿದ್ದಳು ಲಕ್ಷ್ಮಿ. ಲಕ್ಷ್ಮಿಗೆ ತನ್ನ ಸೋಲು ಸಂಪೂರ್ಣವಾದಂತೆನಿಸಿತು. ಅವಳು ಯಾವ ಮಾತನ್ನು ಆಡಲಿಲ್ಲ. ಅಳಲೂ ಇಲ್ಲ. ಅಂದೇ ತನ್ನ ತಾಯಿ ಸಾಯುವಾಗ ಕೊಟ್ಟು ಹೋಗಿದ್ದ ಬೆಂಡೋಲೆಗಳನ್ನು ಸಹ ಮಾರಿ ಬಂದಿದ್ದಳು. ಎಲ್ಲ ದುಃಖ ಅವಳ ದೇಹದಲ್ಲಿ ತುಂಬಿಕೊಳ್ಳತೊಡಗಿತು. ಮನೆಯ ಹಿತ್ತಲಲ್ಲಿದ್ದ ಎಮ್ಮೆಯ ಶವವನ್ನು ಕೊಟ್ಟಿಗೆಗೆ ಎಳೆಸಿ ಚಾಪೆ ಹೊಚ್ಚಿದಳು. ಅದರ ಕಣ್ಣು ನೋಡಿದಳು. ಜೀವ ಇದೆಯೋ ಏನೋ ಎನಿಸಿತು. ಮರುದಿನ ಎಮ್ಮೆಯನ್ನು ಸಾಗಿಸಿ ಮಣ್ಣು ಮಾಡಲು ವ್ಯವಸ್ಥೆ ಮಾಡಿದಳು.

ಆ ಇಡೀ ರಾತ್ರಿ ಎಮ್ಮೆಯ ಕರು ತಾಯಿಗಾಗಿ ಅರಚುತ್ತಿತ್ತು. ಭದ್ರಿ ಹುಚ್ಚುನಾಯಿ ಕಡಿತದ ನೋವಿಗೂ, ಇಂಜೆಕ್ಷನ್ ನೋವಿಗೂ ಬೆಂಕಿಯಂಥ ಜ್ವರ ಬಂದು ನರಳುತ್ತಿದ್ದ. ಸೀತ ಗೀತ ಮಾತು ಕಳೆದುಕೊಂಡಂತಾಗಿದ್ದರು.

ಜಯ್ಯಣ್ಣ ಮೇಷ್ಟ್ರ ಮರಣ ಹತ್ತಿರ ಬಂದಿದೆ ಮತ್ತು ಅದರಿಂದ ತನಗೆ ಅನುಕೂಲವಾಗುತ್ತದೆ ಎಂಬ ಮಾತುಗಳು ಲಕ್ಷ್ಮಿಗೆ ಮತ್ತೆ ಮತ್ತೆ ನೆನಪಾಗಿ ದುಃಖ ಉಕ್ಕಿ ಬಂದಿತು. ಎಲ್ಲಿಂದಲೋ ತಡರಾತ್ರಿಯಲ್ಲಿ ಬಂದ ಜಯ್ಯಣ್ಣ ಮನೆಯ ಹೊರಗೆ ಕಟ್ಟೆಯ ಮೇಲೆ ಮಲಗಿ 'ಸುಖದ ಸ್ವರ್ಗದಲ್ಲಿರುವ ದೇವರೇ ಬಡವರ ಮೇಲೆ ನಿನಗೇಕಿಷ್ಟು ಸಿಟ್ಟು? ಎಮ್ಮೆಯನ್ನೇಕೆ ಕೊಂದೆ? ನನ್ನನ್ನೇ ಕೊಲ್ಲಬೇಕಿತ್ತು. ದುರ್ಬಲರ ಮೇಲೆ ನಿನ್ನಾಟ ನಡೆಸುತ್ತೀಯೆ?' ಎಂದು ವಿಧ ವಿಧವಾಗಿ ದೇವರನ್ನು ತರಾಟೆಗೆ ತೆಗೆದುಕೊಂಡಿದ್ದ. ಮೇಷ್ಟ್ರ ಕೂಗು ಎದೆ ಒಡೆಯುವಷ್ಟು ಭೀಕರವಾಗಿತ್ತು.

ಲಕ್ಷ್ಮಿಗೆ ದಿನವೂ ಎಮ್ಮೆ ಕಟ್ಟುತ್ತಿದ್ದ ಜಾಗ ಖಾಲಿ ಖಾಲಿ ಕಾಣಿಸಿತು. ಕರು ಅರಚುತ್ತಿತ್ತು. ಹೊತ್ತಾಗಿದ್ದರೂ ಗೀತ ಸೀತ ಕರುವನ್ನು ಬಾಚಿ ತಬ್ಬಿಕೊಂಡು ಗೊಟ್ಟದಲ್ಲಿ ಇನ್ನೊಂದು ಎಮ್ಮೆಯ ಹಾಲನ್ನು ಕಷ್ಟಪಟ್ಟು ಕುಡಿಸುವುದೂ, ಲೊಚಗುಟ್ಟುವುದೂ, ಅಳುವುದೂ ಮಾಡುತ್ತಿದ್ದರು. ಭದ್ರಿ ಕುಂಟುತ್ತಲೇ ಬಂದು ಪಕ್ಕದಲ್ಲಿ ಕುಳಿತುಕೊಂಡಿದ್ದ.

ಬೆಳಿಗ್ಗೆ ದಾರಿಗುಂಟ ಜಯ್ಯಣ್ಣ ಮೇಷ್ಟ್ರು ಸತ್ತು ಹೋದ ಬಗ್ಗೆ ಮಾತನಾಡಿ ಕೊಂಡು ಹಾದು ಹೋದ ಹುಡುಗರಿಗೆ ಸ್ವಲ್ಪ ಹೊತ್ತಿನ ನಂತರ ವಾಪಸ್ಸು ಬಂದಾಗ ಆಶ್ಚರ್ಯ ಕಾದಿತ್ತು. ಮನೆ ಮುಂದೆ ಸಾಕ್ಷಾತ್ ಜಯ್ಯಣ್ಣ ಮೇಷ್ಟ್ರು 'ಅಯ್ಯಯ್ಯೋ ನಾವು ಹಾಳಾಗಿ ಹೋದ್ವಿ. ನಮ್ಮನೆ ದೀಪ ಆರಿಹೋಯ್ತು. ಸ್ವರ್ಗದಲ್ಲಿರುವ ದೇವರೇ ಅಸಹಾಯಕರ ಜೊತೆ ನಿನ್ನ ಚೆಲ್ಲಾಟ ತರವಲ್ಲ' ಎಂದು ಕೂಗಿ ಅಳುತ್ತಿದ್ದರು.

ಎಮ್ಮೆ ಸತ್ತು ಹೋಗಿದ್ದಕ್ಕೆ ಹೊಗೆ ಹಾಕಿ ಜಯ್ಯಣ್ಣ ಮೇಷ್ಟ್ರು ಕುಡಿದು ಬಾಯಿಗೆ ಬಂದದ್ದು ವದರುತ್ತ ಅಳುತ್ತಿರಬಹುದೆಂದು ಭಾವಿಸಿ ಆ ಹುಡುಗರು ಎಮ್ಮೆಯನ್ನು ಗಾಡಿಗೆ ಹೇರುತ್ತಿದ್ದ ಕಡೆ ಬಂದು ನಿಂತರು. ಎಮ್ಮೆ ಶವವಾಗಲೇ ವಾಸನೆ ಹೊಡೆಯುತ್ತಿತ್ತು.

ಮನೆಯೊಳಗೂ, ಹೊರಗೂ ಜನ ಗುಂಪು ಗುಂಪಾಗಿ ಅಳುತ್ತ ಹೋಗಿ ಬರುತ್ತಿರುವುದನ್ನು ನೋಡಿದ ಹುಡುಗರು ಅನುಮಾನಿಸಿ ಒಳಗೆ ಬೇರಾರೋ ಸತ್ತಿರಬೇಕೆಂದು ಒಳಗೆ ನುಗ್ಗಿದರು. ಹುಡುಗರ ಮನಸ್ಸಿನಲ್ಲಿ ಹುಚ್ಚು ನಾಯಿ ಕಡಿತದಿಂದ ಭದ್ರಿಯೇ ಸತ್ತಿರಬೇಕೆಂಬ ಕಲ್ಪನೆ ಮೂಡಿತು. ತಮ್ಮ ಜೊತೆ ಸಾಲು ಚೆಂಡು, ಮರಕೋತಿ ಆಡುತ್ತಿದ್ದ ಭದ್ರಿಯನ್ನು ನೆನೆಸಿಕೊಂಡು ಅವರಿಗೆ ಅಳು ಬಂದಿತು.

ಜಯ್ಯಣ್ಣ ಮೇಷ್ಟ್ರ ಸಣ್ಣ ಮನೆಯ ಮಧ್ಯದ ಹಾಲಿನಲ್ಲಿ ಇಣುಕಿದ ಹುಡುಗರಿಗೆ ಆಘಾತ ಕಾದಿತ್ತು. ಲಕ್ಷ್ಮಿಯ ದೇಹವನ್ನು ಹಾಲಿನ ಮಧ್ಯದಲ್ಲಿ ಇರಿಸಿದ್ದರು. ಗೀತ, ಸೀತ, ಭದ್ರಿಯರನ್ನು ಹಲವಾರು ಜನ ಹೆಣ್ಣುಮಕ್ಕಳು ಕಣ್ಣೀರು ಸುರಿಸುತ್ತ ಸಂತೈಸುತ್ತಿದ್ದರು. ಮಕ್ಕಳ ಅಳು ಮುಗಿಲು ಮುಟ್ಟಿತ್ತು.

ಜೀವವಿಲ್ಲದ ಲಕ್ಷ್ಮಿಯ ಮುಖ ತುಂಬಾ ಸುಸ್ತಾದಂತಿತ್ತು.